ಸರ್ಕಾರಿ ಧೋರಣೆ ಬಿಟ್ಟು ಹೋಗಿ ಏನೂ ಹೇಳುವುದಕ್ಕೆ ಆಗುವುದಿಲ್ಲ. ಹೇಳುವುದೂ ಕೂಡ ತಪ್ಪಾಗುತ್ತದೆ. ಈ ಒಂದು ವ್ಯವಸ್ಥೆಯನ್ನು ಮಾಡುವ ಪ್ರಯತ್ನವನ್ನೂ ಕೂಡ ಖಂಡಿತವಾಗಿ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ :- ಒಂದು ಸಣ್ಣ ಕ್ಲಾರಿಫಿಕೇಷನ್.....

**MR. CHAIRMAN:-** No furter clarifications ಇದೊಂದು ಪ್ರಕಟಣೆ ಇದೆ.

(13) ಪ್ರಕಟಣೆಗಳು

1. ಆರನೆ ಅಧಿವೇಶನದಲ್ಲಿ ತಡೆಹಿಡಿಯಲಾದ 64 ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 36ಕ್ಕೆ ಉತ್ತರಗಳನ್ನು ಸ್ವೀಕರಿಸಲಾಗಿದ್ದು, ಅವುಗಳನ್ನು ಸದನದಲ್ಲಿ ಮಂಡಿಸುವುದು.

   ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) :- ಮಂಡಿಸಲಾಯಿತು. ಅನುಬಂಧ-IV

2. ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. "ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಪರಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ಜಂಟಿ ಸದನ ಪರಿಶೀಲನಾ ಸಮಿತಿಗೆ ವಿಧಾನಪರಿಷತ್ತಿನ ಸಹಮತಿಯೋಡನೆ ಈ ಕೆಳಕಂಡ ಐದು ಜನ ವಿಧಾನಪರಿಷತ್ ಸದಸ್ಯರನ್ನು ನಾಮನಿರ್ದೇಶನ ಮಾಡಿರುತ್ತಾರೆ. ಶ್ರೀಯುತರುಗಳಾದ ಎ.ಎಂ. ಹಿಂಡಸಗೇರಿ, ವಿ.ಆರ್. ಸುದರ್ಶನ್, ಹೆಚ್.ಎಸ್. ಶಾಂತವೀರಪ್ಪಗೌಡ, ಬಿ.ಜಿ. ಪಾಟೀಲ್, ಎಂ.ಪಿ. ಪ್ರಕಾಶ್

ಈಗ ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ವಿಧೇಯಕ 2002, ವಿಧಾನಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ. ಮಾನ್ಯ ಚಂದ್ರೇಗೌಡರೆ, ತಾವು.....

ಶ್ರೀ ಪಿ.ಜಿ.ಆರ್. ಸಿಂಧ್ಯ :- ಚೇರ್ಮನ್‌ರವರೆ, ನಾವು ಬೆಳಿಗ್ಗೆ ಒಂಬತ್ತು ಗಂಟೆಗೆ ಮನೆ ಬಿಡುತ್ತೇವೆ. ಹತ್ತು ಗಂಟೆಗೆ ಇಲ್ಲಿಗೆ ಬರುತ್ತೇವೆ. ಬರುವವರಿಗೆ ಶಿಕ್ಷೆ ಕೊಡಬೇಕೆಂದು ಇದ್ದೀರ. ಸೋಮವಾರ ಮಾಡಿಕೊಡುತ್ತೇವೆ. I have got a function at Ramanagaram ಅವರು ಕಾಯ್ದುಕೊಂಡಿರುತ್ತಾರೆ. ನಾವೇನೋ ಐದಾರು ಗಂಟೆಗೆ ಮುಕ್ತಾಯವಾಗುತ್ತದೆಂದು ಹೇಳಿದರೆ ನೀವು ಎಲ್ಲಾ ತೆಗೆದುಕೊಂಡರೆ, ಎಲ್ಲಾ ನಾವು ಮಾಡಿಕೊಟ್ಟಿದ್ದೇವೆ.

ಚೇರ್ಮನ್ :- ಹತ್ತು ನಿಮಿಷ....

ಶ್ರೀ ಪಿ.ಜಿ.ಆರ್. ಸಿಂಧ್ಯ :- ನೀವು ಆಡಳಿತ ಪಕ್ಷದವರು ಮಾಡಿಕೊಳ್ಳಿ, ನಾವು ಆಚೆ ಹೋಗುತ್ತೇವೆ. I am very sorry Sir,

ಶ್ರೀ ಡಿ.ಬಿ. ಚಂದ್ರೇಗೌಡ :- ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಇಲ್ಲ ಸ್ವಾಮಿ ಆಗುವುದಿಲ್ಲ. ಇದನ್ನು ಸೋಮವಾರ ಮಾಡೋಣ. ಏನು ಆಗಿಬಿಡುತ್ತದೆ?

ಚೇರ್ಮನ್ :- ಇದೊಂದು ಕರ್ನಾಟಕ ಪೌರಸಭೆಗಳು (ತಿದ್ದುಪಡಿ) ವಿಧೇಯಕ...